ಪ್ರವಾಸ–ಇತಿಹಾಸ



ಮೊಧೇರಾ ಸೂರ್ಯದೇವಾಲಯ; ಪಾರ್ಶ್ವನೋಟದಲ್ಲಿ ಕಾಣುವ ಸಭಾಮಂಟಪ ಹಾಗೂ ಗರ್ಭಗುಡಿ

# ಮೊಧೇರಾ ಸೂರ್ಯಮಂದಿರ

## ಭಾರತೀಯ ಕಲಾ ಪರಂಪರೆಯ ಸೂರ್ಯ!

**ಶಿಲ್ಪಕಲೆ–ವಿಜ್ಞಾನ–ಪ್ರಕೃತಿಯ ಸಮ್ಮಿಲನದಂತಿರುವ ಗುಜರಾತಿನ ಮೊಧೇರಾ ಸೂರ್ಯ ದೇವಾಲಯ ಸಾವಿರ ವರ್ಷಗಳನ್ನು ಪೂರೈಸುತ್ತಿದೆ. ಪ್ರಾಚೀನ ಶಿಲ್ಪಕಾರರ ಕಲಾ ನೈಪುಣ್ಯಕ್ಕೆ ಸಾಕ್ಷಿಯಂತಿರುವ ಶಿಲ್ಪಗಳ ಸಮ್ಮೇಳನವೇ ಈ ದೇಗುಲದಲ್ಲಿ ಮೇಳೈಸಿದೆ.**

■ **ರವಿಶಂಕರ್ ಎಸ್.ಎಲ್.**

ಸೂರ್ಯನನ್ನು ನೋಡಿದ ಕವಿ ಕುವೆಂಪು ಅವರಿಗೆ 'ಆನಂದಮಯ ಈ ಜಗ ಹೃದಯ...' ಅನ್ನಿಸಿತು. ಅಂತಹುದೇ ಭಾವನೆ ಮೊಧೇರಾದ ಸೂರ್ಯ ದೇವಾಲಯವನ್ನು ನೋಡಿದ ರಸಿಕನ ಮನದಲ್ಲೂ ಸ್ಫುರಿಸಿದರೆ ಆಶ್ಚರ್ಯವೇನೂ ಇಲ್ಲ. ಇನ್ನೇನು ಒಂದು ಸಾವಿರ ವರ್ಷಗಳನ್ನು ಪೂರೈಸಲು ಸಜ್ಜಾಗಿರುವ ಗುಜರಾತಿನ ಈ ಸೂರ್ಯ ದೇವಾಲಯವು ಭಾರತದ ಶಿಲ್ಪಕಲೆ–ವಿಜ್ಞಾನ–ಪರಿಸರ ಜಾಗೃತಿ, ಇವುಗಳ ದ್ಯೋತಕ.

ಭಾರತದ ಸೂರ್ಯ ಮಂದಿರಗಳ ಪಟ್ಟಿಯಲ್ಲಿ ಪ್ರವಾಸಿಗರನ್ನು ಆಕರ್ಷಿಸುವಲ್ಲಿ ಕೊನಾರ್ಕ್‌ನಲ್ಲಿನ ಸೂರ್ಯ ದೇವಾಲಯ ಮೊದಲ ಸ್ಥಾನದಲ್ಲಿದ್ದರೆ, ಮೊಧೇರಾ ದೇವಾಲಯದ್ದು ಎರಡನೇ ಸ್ಥಾನ. ಈ ದೇಗುಲ, ಗುಜರಾತ್ ರಾಜ್ಯದ ಮೆಹಸಾನ ಜಿಲ್ಲಾ ಕೇಂದ್ರದಿಂದ 35 ಕಿ.ಮೀ. ದೂರದಲ್ಲಿದೆ.

ಮೊಧೇರಾ ಸಣ್ಣ ಪಟ್ಟಣ. ಪುಷ್ಪಾವತಿ ಎಂಬ ನದಿ ದಂಡೆಯ ಮೇಲಿದೆ. ಮೊಧೇರಾ ಸೂರ್ಯ ಮಂದಿರವನ್ನು ಸೋಲಂಕಿ (ಚಾಲುಕ್ಯ) ರಾಜವಂಶದ ಮೊದಲನೇ ಭೀಮದೇವನು 1026ರಲ್ಲಿ ಕಟ್ಟಿಸಿದ ಎಂಬ ಮಾಹಿತಿ ದೇವಾಲಯದಲ್ಲಿನ ಶಿಲಾಶಾಸನದಿಂದ ತಿಳಿದುಬಂದಿದೆ. ಈ ಭಾಗದ ಪ್ರದೇಶವು ಧರ್ಮಾರಣ್ಯ ಅಥವಾ ಭಾಸ್ಕರಕ್ಷೇತ್ರ ಎಂಬ ಹೆಸರಿನಲ್ಲಿ ಸ್ಕಂದ ಪುರಾಣದಲ್ಲಿ ಉಲ್ಲೇಖವಾಗಿದೆ. ದೇವಾಲಯವು ಮಾರು–ಗುರ್ಜರ ಶೈಲಿಯಲ್ಲಿದ್ದು, ಮೂರು ವಿಭಾಗಗಳ ರಚನೆ ಹೊಂದಿದೆ. ಗರ್ಭಗೃಹ ಹಾಗೂ ಗುಧಮಂಟಪಗಳು ಒಂದು ಭಾಗ, ನೃತ್ಯಮಂಟಪ ಎರಡನೇ ಭಾಗ ಹಾಗೂ ಗೂಡು ಗುಡಿಗಳನ್ನೂ, 108 ಪಿರಮಿಡ್ ಆಕಾರದ ಆಲಂಕಾರಿಕ ಸಣ್ಣಸಣ್ಣ ಉಪ ಮೆಟ್ಟಿಲುಗಳನ್ನು ಹೊಂದಿರುವ ಸೂರ್ಯಕುಂಡ ಅಥವಾ ರಾಮಕುಂಡ ಹೆಸರಿನ ಕಲ್ಯಾಣಿಯು ಮೂರನೇ ಭಾಗವಾಗಿದೆ.

ಇಡೀ ದೇವಾಲಯವನ್ನು ಸುಮಾರು ಎರಡು ಮೀಟರ್ ಎತ್ತರದ ಜಗತಿಯ ಮೇಲೆ ನಿರ್ಮಿಸಲಾಗಿದೆ. ಒಂದು ವರ್ಷದಲ್ಲಿ ಎರಡು ಬಾರಿ ಸಂಭವಿಸುವ 'ವಿಷುವತ್ ಸಂಕ್ರಾಂತಿ' (Equinox) ಹಾಗೂ 'ಆಯನ ಸಂಕ್ರಾಂತಿ'ಯ (Solstice) ದಿನಗಳಲ್ಲಿ ಸೂರ್ಯನ ಮೊದಲ ಕಿರಣಗಳು ದೇವಾಲಯದ ಮೂರು ಭಾಗಗಳನ್ನು ನೇರವಾಗಿ ಹಾದು ಗರ್ಭಗುಡಿ ತಲುಪುವಂತೆ ಗಣಿತೀಯವಾಗಿ ಕರಾರುವಾಕ್ಕಾಗಿ ದೇವಾಲಯ ಕಟ್ಟಲಾಗಿದೆ.

ಆವರಣ ಪ್ರವೇಶಿಸಿ, ದೇವಾಲಯದ ಕಡೆ ನಡೆಯುತ್ತಿದಂತೆಯೇ ಕಂಬದ ರಚನೆಗಳು ಹಾಗೂ ದೂರಕ್ಕೆ ಅಸ್ಪಷ್ಟವಾಗಿ ಗೋಚರಿಸುವ ಮನುಷ್ಯಾಕೃತಿಯ ಶಿಲ್ಪಗಳು ಒಂದು ರೀತಿಯ ಆನಂದವನ್ನು ಹೃದಯದಲ್ಲಿ ಮಿಡಿಯುವಂತೆ ಮಾಡುತ್ತವೆ. ಇನ್ನೂ ಹತ್ತಿರ ಹೋಗಿ ಶಿಲ್ಪಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಒಂದು ಸುತ್ತು ಬಂದರೆ, ದಿವ್ಯವಾದ ಕಲಾಲೋಕದಲ್ಲಿರುವಂತೆ ಭಾಸವಾಗುತ್ತದೆ. ನಸು ಹಳದಿ ಬಣ್ಣದ ಮರಳು ಶಿಲೆಯ ಅತಿ ಭಾರವಾದ ದೈತ್ಯಕಲ್ಲುಗಳನ್ನು ನಾಜೂಕಾಗಿ ಕಡೆದು ತಂದು, ಪೇರಿಸಿ, ಬರೀ ಕಲ್ಲುಗಳಿಂದಲೇ ಪರಸ್ಪರ ಬಂಧ ರಚನೆಗಳಿಂದ ಬೆಸೆದು, ದೃಢ ಹಾಗೂ ಶಿಲ್ಪಕಲಾ ಭವ್ಯ ನಿರ್ಮಾಣಗಳನ್ನು ನಮ್ಮ ಪ್ರಾಚೀನ ಶಿಲ್ಪಿಗಳು ಹೇಗೆ ಮಾಡಿದರು ಎನ್ನುವುದು ಇಂದಿಗೂ